**ಮಧ್ಯಂತರ ಅರ್ಜಿ ನಂ. VII ರ ಮೇಲೆ ಆದೇಶ**

1. ಅರ್ಜಿದಾರ/ವಾದಿಯು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಅರ್ಜಿಯಲ್ಲಿ ತಿಳಿಸಿದ ತಿದ್ದುಪಡಿಯನ್ನು ಮಾಡಲು ವಿನಂತಿಸಿರುತ್ತಾರೆ. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ವಾದಿಯು ಹೆಬ್ಬುಳ ಗ್ರಾಮದ ಜಮೀನು ಸ.ನಂ. 14/2 ರ ಮಾಲೀಕರು ವ , ಕಬಜೆದಾರಳು ಇದ್ದು, ಕಬಜಾ ವಹಿವಾಟಿಗೆ ತೊಂದರೆ ಉಂಟುಪಡಿಸದಂತೆ ಪ್ರತಿವಾದಿಯರ ವಿರುದ್ಧ ನಿರಂತರ ಮನಾಯಿ ಕೇಳಿರುತ್ತಾಳೆ. ಸದರಿ ದಾವಾಸ್ತಿ ಪೈಕಿ ಈ ಮೊದಲು 0-10-0 ಕ್ಷೇತ್ರ ತೋರಿಸಿದ್ದು, ಅದನ್ನು ಬ್ಲಾಕ್ ನಂ. 14 ಎಂದು ದಾವಾ ಅನುಸೂಚಿಯಲ್ಲಿ ಬರೆಯಲಾಗಿದೆ. ಆದರೆ ದಾವಾ ಸಂಪೂರ್ಣ ಆಸ್ತಿ ಬ್ಲಾಕ್ ನಂ. 14/2 ಎಂದು ಇದ್ದು, ಅದರ ವಿಸ್ತೀರ್ಣ 1-29-0 ಇದ್ದು, ಅದರ ಪೈಕಿ 0-1-0 ಪೋಟ ಖರಾಬ 'ಎ' ಇರುತ್ತದೆ.

2. ಸದರಿ ದಾವಾ ಚಾಲ್ತಿಯಲ್ಲಿದ್ದಾಗ, ವಾದಿ - ಪ್ರತಿವಾದಿಯರ ಜಮೀನಿನ ನಡುವೆ ಇರುವ ತಂತಿ ಬೇಲಿಯನ್ನು ಪ್ರತಿವಾದಿಯರು ಇತ್ತೀಚೆಗೆ ತೆಗೆದು ಹಾಕಿ 0-2-0 ಜಮೀನನ್ನು ಅತಿಕ್ರಮಿಸಿರುತ್ತಾರೆ. ಕಾರಣ ಸದರಿ ಆಸ್ತಿಯ ಕಬ್ಜೆಯನ್ನು ಪರತ್ ಪಡೆಯಲು ಪ್ರತಿವಾದಿಯರ ವಿರುದ್ಧ ನಿರ್ದೇಶನಾತ್ಮಕ ಮನಾಯಿ ಕೇಳುವುದು ಅತೀ ಅವಶ್ಯವಿರುತ್ತದೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ದಾವಾಸ್ತಿಯ ನಂಬರ ಸರಿಪಡಿಸಲು ಹಾಗೂ ನಿರ್ದೇಶನ ಮನಾಯಿ ಪ್ರಾರ್ಥನೆ ಸೇರಿಸಲು ಅನುಮತಿ ನೀಡಬೇಕೆಂದು ವಿನಂತಿಸಿರುತ್ತಾರೆ. ಸದರಿ ಅರ್ಜಿಗೆ ಪ್ರತಿವಾದಿಯರ ಪರ ತಕರಾರು ಸಲ್ಲಿಸಿ ಪ್ರತಿವಾದಿಯರು ಯಾವುದೇ ಕ್ಷೇತ್ರವನ್ನು ಅತಿಕ್ರಮಿಸಿರುವುದಿಲ್ಲ ಹಾಗೂ ವಾದಿ ಹೇಳುವಂತೆ ಅತಿಕ್ರಮಣವನ್ನು ಯಾವಾಗ ಮಾಡಿದ್ದಾರೆ ಎನ್ನುವುದನ್ನು ಸಹ ವಾದಿ ಸ್ಪಷ್ಟಪಡಿಸಿರುವುದಿಲ್ಲ. ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

3. ಸದರಿ ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ, ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ಮಧ್ಯಂತರ ಅರ್ಜಿ ನಂ. VII ರಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹರಿರುತ್ತಾಳೆಯೇ ?
2. ಯಾವ ಆದೇಶ ?

**ಕಾರಣಗಳು**

**4.** **ಅಂಶ ನಂ.1**:–ದಾವಾಸ್ತಿಯ ಕುರಿತು ನಿರಂತರ ಮನಾಯಿ ಕೇಳಿ ವಾದಿಯು ದಾವೆ ಸಲ್ಲಿಸಿರುತ್ತಾರೆ. ಪ್ರಸ್ತುತ ದಾವೆಯಲ್ಲಿ ಪ್ರಕರಣವನ್ನು ವಾದ

ವಿವಾದಕ್ಕೆ ನೇಮಿಸಿದಾಗ ಅರ್ಜಿಯನ್ನು ಸಲ್ಲಿಸಿ ತಿದ್ದುಪಡಿ ಮಾಡಲು ಕೇಳಿರುತ್ತಾರೆ. ತಿದ್ದುಪಡಿ ಅರ್ಜಿಗಳನ್ನು ನಿರ್ಧರಿಸುವ ಸಮಯದಲ್ಲಿ ಸ್ವಾಭಾವಿಕ ನ್ಯಾಯದ ತತ್ವ ಹಾಗೂ ನ್ಯಾಯದ ವಿಫಲತೆ ಕುರಿತು ಅವಲೋಕಿಸಬೇಕಾಗುತ್ತದೆ. ಅದೇ ರೀತಿ ಪಕ್ಷಗಾರರ ನಡುವೆ ಇರುವ ನಿಜವಾದ ಪ್ರಶ್ನೆಯನ್ನು ನಿರ್ಧರಿಸಲು ಅಂತಹ ತಿದ್ದುಪಡಿ ಅವಶ್ಯಕವಾಗಿರುತ್ತದೆ ಎಂದು ಮನಗಂಡಾಗ ಅರ್ಜಿಯನ್ನು ಪುರಸ್ಕರಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿಯನ್ನು ಅವಲೋಕಿಸಿದಾಗ, ದಾವೆ ಚಾಲ್ತಿಯಲ್ಲಿದ್ದಾಗ ಇತ್ತೀಚೆಗೆ ಪ್ರತಿವಾದಿಯರು ದಾವಾಸ್ತಿಯ ಹಾಗೂ ಪ್ರತಿವಾದಿಯರ ಆಸ್ತಿ ನಡುವೆ ಇರುವ ತಂತಿ ಬೇಲಿಯನ್ನು ತೆಗೆದು ಹಾಕಿ ಜಮೀನು ಅತಿಕ್ರಮಿಸಿಕೊಂಡಿರುತ್ತಾರೆಂದು ವಾದಿ ತನ್ನ ಪ್ರಮಾಣಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ದಾವಾ ಚಾಲ್ತಿಯಲ್ಲಿದ್ದಾಗ ಪ್ರತಿವಾದಿಯರು ಕೈಗೊಂಡ ಬೇಕಾಯ್ದೆಶೀರ ಕ್ರಮಗಳ ಕುರಿತು ದಾವೆಯಲ್ಲಿ ಮುಂದುವರೆದು ಪರಿಹಾರವನ್ನು ಕೇಳಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿಯಲ್ಲಿಯ ಸಂಗತಿಗಳನ್ನು ಅವಲೋಕಿಸಿದಾಗ ದಾವೆ ಚಾಲ್ತಿಯಲ್ಲಿದ್ದಾಗ ಪ್ರತಿವಾದಿಯರು ತಂತಿ ಬೇಲಿಯನ್ನು ತೆಗೆದು ಹಾಕಿ ದಾವಾಸ್ತಿ ಪೈಕಿ ಉತ್ತರ ಹಾಗೂ ಪಶ್ಚಿಮದ ಕಡೆ ಅಂದಾಜು 0-2-0 ಕ್ಷೇತ್ರವನ್ನು ಅತಿಕ್ರಮಿಸಿಕೊಂಡಿರುವ ಕುರಿತು ತಿಳಿಸಿರುತ್ತಾರೆ. ಕಾರಣ ಒಂದು ವೇಳೆ ತಿದ್ದುಪಡಿ ಅರ್ಜಿಯನ್ನು ಈ ಹಂತದಲ್ಲಿ ಪುರಸ್ಕರಿಸದೇ ಹೋದರೆ ವಾದಿ

ಹಾಗೂ ಪ್ರತಿವಾದಿಯರ ನಡುವೆ ವ್ಯಾಜ್ಯಗಳ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ. ಮತ್ತು ಸದರಿ ತಿದ್ದುಪಡಿಯಲ್ಲಿ ಕೇಳಿದ ಪ್ರಾರ್ಥನೆಯು ದಾವೆ ಚಾಲ್ತಿಯಲ್ಲಿದ್ದಾಗ ನಡೆದ ಘಟನೆಯಾಗಿರುತ್ತದೆ ಎಂದು ವಾದಿ ತನ್ನ ಪ್ರಮಾಣಪತ್ರದಲ್ಲಿ ತಿಳಿಸಿರುತ್ತಾರೆ. ಅವುಗಳ ಕುರಿತು ಸಹ ಪ್ರಸ್ತುತ ದಾವೆಯಲ್ಲಿ ನಿರ್ಧರಿಸಲು ಅವಕಾಶವಿರುತ್ತದೆ. ಕಾರಣ ವಾದಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂದು ಪರಿಗಣಿಸಿ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

**5.** **ಅಂಶ ನಂ.2ಃ** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**ಆದೇಶ**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ–6 ರ ನಿಯಮ– 17 ರ ಜೊತೆಗೆ ಕಲಂ– 151 ರಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ.7 ನ್ನು ಪುರಸ್ಕರಿಸಲಾಗಿದೆ..

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು ನಂತರ ಕರೆಯಿರಿ.

**ದಿವಾಣಿ ನ್ಯಾಯಾಲಯ , ಅಂಕೋಲಾ**